ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.
ಸಿಸಿ ನಂಬರ್ **11/2024**

ಫಿರ್ಯಾದಿ ಸರಕಾರ **(**ಗುತ್ತಲ ಪೊಲೀಸ ಠಾಣೆ**).**

ವಿರುದ್ದ

ಆರೋಪಿತರುಃ **1.** ತಿರಕಪ್ಪ ನಿಂಗಪ್ಪ ಸುಗನಿಂಗಣ್ಣನವರ ಉರ್ಫ ಪರಸಣ್ಣನವರ**,** ವಯಾಃ **28** ವರ್ಷ**,** ಉದ್ಯೋಗಃ ಕೂಲಿ**,** ಸಾಃ ಗುತ್ತಲ ತಾಃಜಿಃ ಹಾವೇರಿ

**2.** ನಿಂಗಪ್ಪ ತಂದೆ ಪರಸಪ್ಪ ಬೂದಿಹಾಳ **(Abated)**

**3.** ರಾಜಪ್ಪ ತಂದೆ ನಿಂಗಪ್ಪ ಸೊಗನೀಲಪ್ಪನವರ ಉರ್ಫ ಪರಸಣ್ಣನವರ**,** ವಯಾಃ **28** ವರ್ಷ**,** ಉದ್ಯೋಗಃ ಕೂಲಿ ಸಾಃಗುತ್ತಲ ತಾಃಜಿಃ ಹಾವೇರಿ**.**

## ಆಪಾದನೆ

ಗುತ್ತಲ ಪೊಲೀಸ ಠಾಣೆ ಸರಹದ್ದಿನಲ್ಲಿ ದಿಃ28.04.2023 ರಂದು 1 ನೇ ಆರೋಪಿತನಾದ ನೀನು ದ್ವಿಚಕ್ರ ವಾಹನ ಚಾಲನೆ ಮಾಡಲು ಅಧಿಕೃತ ಚಾಲನಾ ಪರವಾನಿಗೆ ಇಲ್ಲದೇ, ವಿಮಾ ಪಾಲಿಸಿ ಇಲ್ಲದ ಮೋಟಾರ ಸೈಕಲ್ಲ ನಂಬರ ಕೆಎ-27/ಇಎಲ್-9376 ರಲ್ಲಿ ಚಾ.ಸಾ-11 ನಾಗರಾಜ ಶಾಂತಪ್ಪರವರನ್ನು ಕೂರಿಸಿಕೊಂಡು ರಾತ್ರಿ ಕೂರಗುಂದ ಗ್ರಾಮದಿಂದ 8-40 ಘಂಟೆಯಲ್ಲಿ ಅತೀ ಜೋರಾಗಿ ನಿರ್ಲಕ್ಷತನದಿಂದ, ಮಾನವೀಯ ಪ್ರಾಣಕ್ಕೆ ಅಪಾಯವಾಗುವಂತೆ ಚಾಲನೆ ಮಾಡಿಕೊಂಡು ಬಂದು, ಕೂರಗುಂದ ಕ್ರಾಸ ಬಳಿ ಯಾವುದೇ ಸೂಚನೆಯನ್ನು ನೀಡದೇ ಏಕಾಏಕಿ ರಸ್ತೆಯಲ್ಲಿ ನಿಧಾನ ಮಾಡಿದ್ದರಿಂದ ಹಿಂದಿನ ಮೋಟಾರ ಸೈಕಲ್ ನಂಬರಃ ಕೆಎ-27/ಇಎಸ್-7057 ನೇದ್ದರ ಸವಾರನು ಡಿಕ್ಕಿಪಡಿಸಿದ್ದು, ಚಾ.ಸಾ-11 ರವರಿಗೆ ಸಾದಾಸ್ವರೂಪದ ಗಾಯಗಳಾಗಿದ್ದು, ದ್ವಿಚಕ್ರ ವಾಹನ ಸಂಖ್ಯೆಃ ಕೆಎ-27-ಇಎಸ್-7057 ನೇದ್ದರ ಸವಾರನಿಗೆ ತೀವ್ರವಾಗಿ ಗಾಯಗಳಾಗಿ ದಿನಾಂಕಃ 29.04.2023 ರಂದು ಬೆಳಿಗ್ಗೆ 4-30 ಘಂಟೆಯಲ್ಲಿ ಮರಣ ಹೊಂದಿದ್ದು, ಗಾಯಾಳುಗಳನ್ನು ಆಸ್ಪತ್ರೆಗೆ ಸೇರಿಸದೇ ವಾಹನ ಸಮೇತ ಪರಾರಿಯಾಗಿದ್ದು, ಕಾರಣ ಭಾರತೀಯ ದಂಡ ಸಂಹಿತೆ **ಕಲಂಃ 279,337,304(ಎ) ಮತ್ತು ಮೋಟಾರು ವಾಹನ ಕಾಯ್ದೆ**

**ಕಲಂ.181,187,196** ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

3 ನೇ ಆರೋಪಿಯಾದ ನೀನು ಮೋಟಾರ ಸೈಕಲ್ ಸಂಖ್ಯೆಃ ಕೆಎ-27/ಇಎಲ್-9376 ನೇದ್ದರ ಮಾಲೀಕರಾಗಿದ್ದು, ಸದರಿ ಮೋಟಾರ ಸೈಕಲಗೆ ವಿಮಾ ಪಾಲಿಸಿಯನ್ನು ಮಾಡಿಸದೇ, ವಾಹನ ಚಾಲನೆ ಮಾಡಲು ಪರವಾನಿಗೆ ಇಲ್ಲದ 1 ನೇ ಆರೋಪಿತನಿಗೆ ಸಾರ್ವಜನಿಕ ರಸ್ತೆಯಲ್ಲಿ ಚಲಾಯಿಸಲು ನೀಡಿದ್ದು, ಕಾರಣ **ಮೋಟಾರು ವಾಹನ ಕಾಯ್ದೆ ಕಲಂ.180, 196 ರಡಿಯಲ್ಲಿ** ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಎಸಗಿರುತ್ತೀರಿ?

ಈ ಮೇಲ್ಕಂಡ ಆಪಾದನೆ ವಿಚಾರಣೆಗೊಳಪಡಿಸಲು ನಿರ್ದೇಶಿಸಿದ್ದೇನೆ.

**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,**
**ಹಾವೇರಿ.**

<u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.</u>
<u>ಸಿಸಿ ನಂಬರ್ **11/2024**</u>
<u>ದಿನಾಂಕಃ **20.01.2025**</u>

<u>ಫಿರ್ಯಾದಿ</u> ಸರಕಾರ (ಗುತ್ತಲ ಪೊಲೀಸ ಠಾಣೆ).

ವಿರುದ್ದ

<u>ಆರೋಪಿ</u> **1.** ತಿರಕಪ್ಪ ನಿಂಗಪ್ಪ ಸುಗನಿಂಗಣ್ಣನವರ ಉರ್ಫ
ಪರಸಣ್ಣನವರ,

1. ಈ ಮೇಲೆ ಹೇಳಿದ ಆಪಾದನೆಯು ನಿನಗೆ ಅರ್ಥವಾಗಿದೆಯೇ?
**ಉತ್ತರಃ**
2. ಈ ಮೇಲೆ ಹೇಳಿದ ಆಪಾದನೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತಿಯೋ?
**ಉತ್ತರಃ**

*(ಈ ಮೇಲೆ ಹೇಳಿದ ಆಪಾದನೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಒದಿ ಹೇಳಿದ್ದು, ಆರೋಪಿ ಅರ್ಥ ಮಾಡಿಕೊಂಡು ಹೇಳಿದ ಹೇಳಿಕೆಯನ್ನು ಅದೇ ರೀತಿ ಬರೆದುಕೊಳ್ಳಲಾಯಿತು)*

**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,**
**ಹಾವೇರಿ.**

**ಆರೋಪಿಯ ಸಹಿ:**

<u>ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾವೇರಿ.</u>
<u>ಸಿಸಿ ನಂಬರ್**11/2024**</u>
<u>ದಿನಾಂಕಃ **20.01.2025.**</u>

<u>ಫಿರ್ಯಾದಿ</u> ಸರಕಾರ (ಗುತ್ತಲ ಪೊಲೀಸ ಠಾಣೆ).

ವಿರುದ್ದ

<u>ಆರೋಪಿ</u> **3.** ರಾಜಪ್ಪ ತಂದೆ ನಿಂಗಪ್ಪ ಸೊಗನೀಲಪ್ಪನವರ ಉರ್ಫ
ಪರಸಣ್ಣನವರ,

1. ಈ ಮೇಲೆ ಹೇಳಿದ ಆಪಾದನೆಯು ನಿನಗೆ ಅರ್ಥವಾಗಿದೆಯೇ?
**ಉತ್ತರಃ**
2. ಈ ಮೇಲೆ ಹೇಳಿದ ಆಪಾದನೆಯನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತಿಯೋ?
**ಉತ್ತರಃ**

*(ಈ ಮೇಲೆ ಹೇಳಿದ ಆಪಾದನೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ಒದಿ ಹೇಳಿದ್ದು, ಆರೋಪಿ ಅರ್ಥ ಮಾಡಿಕೊಂಡು ಹೇಳಿದ ಹೇಳಿಕೆಯನ್ನು ಅದೇ ರೀತಿ ಬರೆದುಕೊಳ್ಳಲಾಯಿತು)*

**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,**
**ಹಾವೇರಿ.**

**ಆರೋಪಿತನ ಸಹಿ:**